IN THE COURT OF THE SENIOR CIVIL JUDGE, MADIKERI
O.S.No.117/15

| | | |
|---|---|---|
| Plaintiff | : | Harishith B.P. and another |
| | | -Vs- |
| Defendant | : | Barike B.Aiyanna and 2 others |

ORDER DATED 19.12.2015

## ಆದೇಶ

ವಾದಿಗಳು ಸಂರಕ್ಷಕಳು ಹಾಜರಿರುತ್ತಾರೆ. ಪ್ರತಿವಾದಿ ಪರ ವಕೀಲರಾದ ಶ್ರೀ ಬಿಸಿಡಿಯವರು ಹಾಜರಿರುತ್ತಾರೆ. ದಿಃ ೧೬.೧೧.೨೦೧೫ರಂದು ಪ್ರತಿವಾದಿಗಳು ದಾವಾ ಆಸ್ತಿಯಲ್ಲಿರುವ ಮರಗಳನ್ನು ಸಾಗಿಸದಂತೆ ಪ್ರತಿಬಂದಕಾಜ್ಞೆಯನ್ನು ನೀಡಲಾಗಿತ್ತು. ಮಾನ್ಯ ಪ್ರತಿವಾದಿ ಪರ ವಕೀಲರು ಮರಗಳ ಮೌಲ್ಯವನ್ನು ಈಗ ನಿರ್ದರಿಸಲು ಸಾಧ್ಯವಿಲ್ಲದೇವಿರುವುದರಿಂದ ಮತ್ತು ಮರಗಳನ್ನು ಸಾಗಿಸುವುದು ಅನಿವಾರ್ಯತೆ ಇರುವುದರಿಂದ ಮರಗಳ ಮೌಲ್ಯವನ್ನು ಅಂದಾಜು ಮಾಡಿ ವಾದಿಗಳು ಈ ದಾವೆಯಲ್ಲಿ ತಮ್ಮ ಭಾಗಾಂಶವನ್ನು ರುಜುವಾತು ಪಡಿಸಿದರೆ ಈಗ ದಾವಾ ಆಸ್ತಿಗಳಲ್ಲಿ ಮಾರಾಟ ಮಾಡಿದ ಮರಗಳ ಮೌಲ್ಯಗಳ ಪೈಕಿ ಅವರಿಗೆ ಸಿಗಬಹುದಾದ ಬಾಗಾಂಶವನ್ನು ಅಂದಾಜು ಮಾಡಿ ರೂ ೨ ಲಕ್ಷ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಡಲು ಅನುಮತಿ ಕೋರಿರುತ್ತಾರೆ.

ವಾದಿ ಸಂರಕ್ಷಕಳು ಮತ್ತು ಅವರ ಪರ ವಕೀಲರು ಮೇಲಿನ ಪ್ರತಿವಾದಿಗಳ ಪ್ರಸ್ತಾವನೆಗೆ ಒಪ್ಪಿರುತ್ತಾರೆ. ಈ ಬಗ್ಗೆ ಉಭಯ ಪಕ್ಷಗಾರರು ಜಂಟಿ ಮೋಮೊ ಸಲ್ಲಿಸಿರುತ್ತಾರೆ. ಮಾನ್ಯ ವಾದಿ ಪರ ವಕೀಲರು ಮೋಮೊ ದಂತೆ ಆದೇಶವಾದಲ್ಲಿ ಅದು ಅಪ್ರಾಪ್ತ ವಾದಿಗಳಿಗೆ ಪ್ರಯೋಜನವಾಗುತ್ತದೆ ಮತ್ತು ಅವರ ಹಿತಾಶಕ್ತಿಗೆ ಯಾವುದೇ ಧಕ್ಕೆ ಆಗುವುದಿಲ್ಲ ಎಂಬ ಅಭಿಪ್ರಾಯವನ್ನು ಸೂಚಿಸಿ ಸಿವಿಲ್ ಪ್ರಕಿಯಾ ಸಂಹಿತೆ ಆದೇಶ ೩೨ ನಿಯಮ ೭ ರಡಿಯಲ್ಲಿ ದೃಡೀಕರಣ ನೀಡಿರುತ್ತಾರೆ. ಜಂಟಿ ಮೋಮೋ ಪರಿಶೀಲಿಸಲಾಯಿತು. ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

ದಿಃ೧೬.೧೧.೨೦೧೫ರಂದು ಪ್ರತಿವಾದಿಗಳನ್ನು ದಾವಾ ಆಸ್ತಿಗಳಲ್ಲಿ ಮರ ಕಡಿದ್ದು ಮಾರಾಟ ಮಾಡದಂತೆ ನೀಡಿದ ಆದೇಶವನ್ನು ರೂ ೨ ಲಕ್ಷ ಹಣವನ್ನು ಈ ನ್ಯಾಯಾಲಯದಲ್ಲಿ ಠೇವಣಿ ಇಡುವ ಷರತ್ತಿನೊಂದಿಗೆ ತೆರವುಗೊಳಿಸಲಾಗಿದೆ. ಪ್ರತಿವಾದಿಗಳು ಮೋಮೆದಲ್ಲಿ ಒಪ್ಪಿರುವಂತೆ ದಾವಾ ಆಸ್ತಿಗಳಲ್ಲಿರುವ ೪೦ ಕೆಂಪು ಬಳಂಜಿ ಮರಗಳನ್ನು ಕಡಿದು ಸಾಗಿಸಲು ಅನುಮತಿಸಲಾಗಿದೆ. ವಾದಿಗಳು ಈ ದಾವೆಯ ಆಸ್ತಿಗಳಲ್ಲಿ ತಮ್ಮ ಭಾಗಾಂಶವನ್ನು ರುಜುವಾತು ಪಡಿಸಿದ್ದಲ್ಲಿ ಅಂತಿಮ ಆದೇಶವಾದ ನಂತರ ಮೇಲೆ ಹೇಳಿದ ರೂ ೨ ಲಕ್ಷ ಮತ್ತು ಅದಕ್ಕೆ ಸಿಗುವ ಬಡ್ಡಿ ಹಣಕ್ಕೆ

ಹಕ್ಕುವುಳವರಾಗಿರುತ್ತಾರೆ. ಪ್ರತಿವಾದಿಗಳು ರೂ ೨ ಲಕ್ಷ ಹಣವನ್ನು ಠೇವಣಿ ಇಟ್ಟ ನಂತರ ಸದರಿ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ವಾರ್ಷಿಕ ನವೀಕರಣಗೊಳ್ಳುವ ನಿಗಧಿತ ಠೇವಣಿ ಇಡಲು ಆದೇಶಿಸಲಾಗಿದೆ. ಪ್ರತಿವಾದಿಗಳು ರೂ ೨ ಲಕ್ಷ ಹಣ ಪಾವತಿಸಿದ ನಂತರ ಮೇಲೆ ಹೇಳಿದ ತೆರವುಗೊಳಿಸಿದ ಆದೇಶವನ್ನು ನೀಡಲು ಕಛೇರಿಗೆ ಸೂಚಿಸಲಾಗಿದೆ.

ಮುಂದಿನ ದಿ:೨.೧.೨೦೧೬ ಕ್ಕೆ ನಿಗಧಿಪಡಿಸಲಾಗಿದೆ.

sd/xxx

(T.C.Srikanth)
Senior Civil Judge,
Madikeri.